ದಿವಾಳಿಯಾದ ಡಿಕ್ರೀ ದೇಣೇದಾರ ಮಂಡ್ಯ ತಾಲ್ಲೂಕು ಮೂರಗೌಡನಹಳ್ಳಿಲಿರುವ ಗಂಗಡಿಕಾರ ಜಾತಿ ವಕ್ಕಲಿಗ

ಕೆಂಪೇಗವ್ವಡನ ಮಗಳು ಲಿಂಗಿ ವ್ರರವಪ್ ಕುಳ್ಳಿಯನ ವಿಷದುದಲ್ಲಿ—

ಸ್ರ್ 1889ನೇ ಇಸವಿ ದಿವಾಳಿ ಕೇಸ್ ನಂಬರ್ 357.

ಹುಕುಂ.

ಮೇಲ್ಕಂಡ ಲಿಂಗಿ ವ್ರರವಪ್ ಕುಳ್ಳಿಯನು ನಿರ್ಬಂಧದಿಂದ ಖುಲಾಸೆಯಾಗಬೇಕೆಂದು ಕೊಟ್ಟ ಅರ್ಜೀ ಅಂಶವು, ಈ ಕೋರ್ಟು ರೂ ಬರೂ ಅರ್ಜೀದಾರರಾದ ಲಿಂಗಿ ವ್ರರವಪ್ ಕುಳ್ಳಿಯನ ಪರವಾಗಿ ಫಸ್ಟ್ ಗ್ರೇಡ್ ಪ್ಲೀಡರ್ ವೆಂಕಟರಾಮಯ್ಯನವರನ್ನೂ ಮತ್ತು ಸದರೀ ಯವನ ಲೇಣೇದಾರ್‌ರಾದ 1ನೇ ಗದ್ದೆಲಿಂಗೇಗವ್ವಡನ ತರಫ್ ಅಡ್ವೋಕೇಟ್ ನರಸಿಂಹ್ಮಾಚಾರ್ ಯಿವರಿಗೂ ದರ್ಯಾಫ್ತ್ ಮಾಡಲ್ಪಟ್ಟಿತು.

ಈ ಕೆಳಗೆ ನಮೂದು ಮಾಡಲ್ಪಡುವ ಲೇಣೇದಾರ್‌ರು ತಮಗೆ ಈ ದರ್ಯಾಫ್ತ್‌ನ ನೋಟಿಸ್ ಜಾರಿಯಾಗಿದ್ದಾಗ್ಯೂ ಖುದ್ದಾಗಿಯಾಗಲಿ ಅಥವಾ ಲಾಯರ್ ಮೂಲಕವಾಗಿಯಾಗಲಿ ಹಾಜರಾಗುವದಕ್ಕೆ ತಪ್ಪಿಹೋದರು ಯಾರಂದರೆ,—2ನೇ ಗೋವೇಗವ್ವಡ.

ಸಿವಿಲ್ ಪ್ರೊಸಿಜ್ಯೂರ್ ಕೋಡಿನ 20ನೇ ಅಧ್ಯಾದುದ ನಿರೂಪಣೆಗಳ ಫಲವನ್ನು ಸದರೀ ಲಿಂಗಿ ವ್ರರವಪ್ ಕುಳ್ಳಿಯನು ಹೊಂದುವ ವಕ್ಕೆ ಹಕ್ಕುದಾರರಾಗುವದರ ಮೂಲಕ ದಿವಾಳಿಯಾದವರೆಂದು ತೀರ್ಮಾನಿಸಲ್ಪಟ್ಟಿರುತ್ತೆಯಾಗಿ ಸದರೀ ದಿವಾಳಿಯಾವವರನ್ನ ನಿರ್ಬಂಧ ದಿಂದ ವಿಮೋಚನೆ ಮಾಡಿರುವದಲ್ಲದೆ ಇದಕ್ಕೆ ಲಗ್ಗತ್ತಾಗಿರುವ ಪಟ್ಟಿಯಲ್ಲಿ ಕಂಡ ಯಾವ ಸಾಲಕ್ಕೂ ಅವರು ಜವಾಬ್ದಾರರಾಗಿರಬಾರದೆಂದು ಆದೇಶ ಮಾಡಲ್ಪಟ್ಟು ನಿರ್ಬಂಧಪಡುವ ಜವಾಬ್ದಾರಿಯಿಂದ ಸಹ ಅವರನ್ನ ನಿಖಾಲಸ್ ಮಾಡಲಾಗಿರುತ್ತೆ ಯೆಂದು ಇದರಿಂದ ಹುಕುಂ ಮಾಡ ಲ್ಪಟ್ಟಿರುತ್ತೆ.

ಸ್ರ್ 1889ನೇ ಇಸವಿ ಡಿಶಂಬರ್ 18ನೇ ತಾರೀಖಿನಲ್ಲಿ ಈ ಕೋರ್ಟು ಮೊಹರ್ ನಮ್ಮ ದಸ್ತಖತ್‌ನಿಶಿ ಕೊಡಲ್ಪಟ್ಟಿತು.

ಸಾಲದ ಪಟ್ಟಿ

ನಂಬರ್.	ಲೇಣೇದಾರ್‌ರು ಅಥವಾ ದಾವಾದಾರ್‌ರ ಹೆಸರು ಮತ್ತು ವಿವರ ಮತ್ತು ಹಾಲೀ ತಿಳಿಯಬಂದ ಅವರುಗಳ ವಾಸಸ್ಥಳ.	ಮೊಬಲಗು.	ಯಾವಾಗ ದೇಣೆ ವುಂಟುದದ್ದು.	ದೇಣೆಯ ಸ್ವಭಾವ ಮತ್ತು ಅದರ ಪ್ರತಿಫಲ ಮತ್ತು ಗಿರ್ವೀ ಯೇನಾದರೂ ಇದ್ದರೆ.	ಷರಾ.
1	ಮಂಡ್ಯ ತಾಲ್ಲೂಕು ಮೂರಗವ್ವಡನಹಳ್ಳಿಲಿರುವ ಗದ್ದೆ ಲಿಂಗೇಗವ್ವಡ. .	47 8 0	.. ..	ಡಿಕ್ರೀ ಬಾಬತ್ತು.	-

ಸಿ. ಶ್ರೀನಿವಾಸಯ್ಯಂಗಾರ್, ಸಬ್ ಜಡ್ಜ್.

ಹಾಸನ ಡಿಸ್ಟ್ರಿಕ್ಟ್.

ತಾರೀಖು 9ನೇ ಡಿಶಂಬರ್ 1889.

1. ಇದರಿಂದ ಸಮಸ್ತ ಜನಗಳಿಗೂ ತಿಳಿಯಪಡಿಸುವದೇನಂದರೆ,—ಹಾಸನ ಡಿಸ್ಟ್ರಿಕ್ಟ್ ಮುಂಜ್ರಾಬಾದು ತಾಲ್ಲೂಕಿನ ಈ ಕೆಳಗೆ ನಮೂದಾಗಲ್ಪಡುವ ಜಮೀನ್ ಕಾಫೀ ಸಾಗುವಳಿಗೋಸ್ಕರ ಇದರ ಕೆಳಗಿನ ಸ್ಟೇಟ್‌ಮೆಂಟಿನ ಷರಾ ಕಾಲಂನಲ್ಲಿ ನಮೂದಾಗುವ ತಾರೀಖು ಮತ್ತು ಸ್ಥಳದಲ್ಲಿ ಮಂಜ್ರಾಬಾದ್ ತಾಲ್ಲೂಕು ಅಮಲ್‌ದಾರ್‌ರವರ ರೂಬರೂಬ್ ಹಾಸನ ಡಿಸ್ಟ್ರಿಕ್ಟ್ ಡೆಪ್ಯೂಟಿ ಕಮ್ಮಿಶ್ನರ್ ಸಾಹೇಬರವರ ಮುಂಜೂರಾತಿಗೆ ಪ್ರೊಪಟ್ಟು ಹರಾಜ್ ಮಾಡಿಸಲ್ಪಡುವದು.

2. ಈ ಹರಾಜ್ ಬಹಿರಂಗವಾಗಿ ದಸ್ತೂರ್ ಷರತ್ತು ಅನುಸರಿಸಿ ಗೊತ್ತಾಗಲ್ಪಟ್ಟ ಎಕರೆಗೆ 10 ರೂಪಾಯಿಗಳ ಮೇಲೆ ಚಡ ದರಖಾಸ್ತು ಮಾಡುವವರ ಹೆಸರಿಗೆ ಖೈದ್ ಮಾಡಲ್ಪಡುವದು. ದರಖಾಸ್ತುದಾರನಿಂದ ಹಾಜರ್ಮಾಡಲ್ಪಟ್ಟು ಗೊತ್ತಾಗಲ್ಪಟ್ಟ ಖರೀದಿಯ ನಾಲ್ಕರಲ್ಲಿ ಒಂದುಭಾಗದ ಡಿಪಾಜಿಟ್ ಹಣವು ದರಖಾಸ್ತುದಾರನ ಹೆಸರಿಗೆ ಹರಾಜು ನಿಂತಪಕ್ಷ ಅವನು ಈ ನೋಟಿಸ್ 4ನೇ ಕ್ಲಾಜ್ ಮೇರಗೆ ಕೊಡಬೇಕಾದ ಕೇಕಡಾ 25 ರೂಪಾಯಿ ಹರಾಜ್ ಹಣದ ಡಿಪಾಜಿಟ್ಟಿಗೆ ವಜಾ ಮಾಡಲ್ಪಡುವದು, ಮತ್ತು ಇತರರು ಚಡ ದರಖಾಸ್ತು ಮಾಡಿ ಅವರಿಗೇನೇ ನಿಂತಪಕ್ಷ ದರಖಾಸ್ತುದಾರನ ಠೇವಣಿಯು ವಾಪಸ್ ಮಾಡಲ್ಪಡುವದು.

3. ಗೊತ್ತಾಗಲ್ಪಟ್ಟ ಖರೀದಿಯು ಸರ್ವೇ ಬಿಚ್ಚನ್ನು ಅಡಗಿಸಿಕೊಂಡು ಯಿರುತ್ತಲ್ಲದೆ ಸಂದಲ್ ವಿನಹ ಬೆಳೆಸಿಕೊಳ್ಳಲ್ಪಟ್ಟ ಜಾತಿ ಯಲ್ಲಮರಗಳ ಗವರ್ನಮೆಂಟ್ ದಕ್ಕನ್ನೂ ಕೇರಿಸಿಕೊಂಡು ಯಿರುತ್ತೆ. ಸಂದಲ್ ಯಾವಾಗ್ಯೂ ಸರ್ಕಾರದ ಹಕ್ಕಿನದೇ ಆಗಿ ಯಿರುತ್ತೆ.

4. ಚಡ ದರಖಾಸ್ತುದಾರನು ಹರಾಜ್ ಖೈದಾದ ವಜನೆಯೇ ಕೇಕಡಾ 25 ರೂಪಾಯಿಗಳ ಮೇರೆ ಕೊಡಬೇಕಲ್ಲದೇ ಬಾಕೀ ಹಣವನ್ನ ಜಾರಿಯಲ್ಲಿರುವ ರೂಲ್ಸ್ ಅನುಸರಿಸಿ ಹರಾಜಾದ ತಾರೀಖು ಲಾಗಾಯತು 15ನೇ ತಾರೀಖಿನ ದಿವಸದ ಸೂರ್ಯಾಸ್ತಮಯದೊಳಗೆ ಕೊಡಬೇಕು. ಹಾಗೆ ಕೊಡದೇ ತಪ್ಪಿದಲ್ಲಿ ಡಿಪಾಜಿಟ್ ಯಿಟ್ಟ ಮೊಬಲಗು ದಂಡವಾಗಿ ತೆಗದುಕೊಳ್ಳುವದಲ್ಲದೇ ಹರಾಜಿನಲ್ಲಿ ತೆಗದು ಕೊಂಡವನ ಅವಗುಣಕ್ಕಾಗಿ ಪುನಶ್ಚ ಹರಾಜ್ ಮಾಡಿಸಲ್ಪಡುವದು. 2ನೇ ಹರಾಜಿನಲ್ಲಿ ಕಮ್ಮಿ ಆಗುವ ಹಣವನ್ನು ಮೊದಲ್ ಹರಾಜ್ ದಾರ ನಿಂದ ವಸೂಲ್ ಮಾಡಲ್ಪಡುತ್ತೆ.

5. ಈ ರೂಲ್ಸ ಅನುಸರಿಸಿ ಹರಾಜ ಮಾಡಲ್ಪಟ್ಟ ಜಮೀನು ಮೂರುವರುಷ ಮುಫತ್ತಾಗಿಯೂ ನಂತರ ಯರಡು ವರುಷ ಅರ್ಧ ಕಂದಾಯಕ್ಕೂ ಆರನೇ ವರುಷದಿಂದ ಪೂರಾ ಕಂದಾಯಕ್ಕೂ ಕೊಡಲ್ಪಡುವದು, ಈ ರಿಯಾಯತಿಯನ್ನು ತೋರಿಸುವದಕ್ಕೆ ಮುಂಚೆ ಚಡವರಸುತ್ತಾರನು ಸದರೀ ಜಮೀನಿನಲ್ಲಿ ಇರತಕ್ಕ ಸಾಗುವಳೀ ಲಾಯಕ್ಕ ಪ್ರದೇಶವನ್ನು ನಿಜವಾಗಿಯೂ ಗಿಡಹಾಕುವದಕ್ಕೆ ಎತ್ನಪಡದೆ ಅಡವಿಯನ್ನು ತೆಗದು ಮರಗಳನ್ನು ಕಡಿದು ರಾಜೀನಾಮೇ ಕೊಟ್ಟದ್ದೇ ಆದರೆ ಮೊದಲ ವರುಷದ ಲಾಗಾಯತು ಪೂರಾ ಕಂದಾಯವನ್ನೂ ಸರಕಾರಕ್ಕೆ ಕೊಡಲು ಬದ್ಧನಾಗಿ ಮುಚ್ಚಳಿಕೇ ಬರದು ಕೊಡಬೇಕು.

ಸ್ಯೆ ನಂಬರ್.	ದರಖಾಸ್ತು ದಾರನ ಹೆಸರು.	ಜಮೀನು ಇರತಕ್ಕ ಗ್ರಾಮದ ಹೆಸರು.	ಚಕ್ಕುಬಂದಿ.	ದರಖಾಸ್ತು ಜಮೀನು ವಿಸ್ತೀರ್ಣ. ಎಕರೆ.		ಆಕಾರ.			ಷರಾ.
				ಎಕರೆ.	ಗುಂಟೆ.	ರೂ.	ಆ.	ಪೈ.	
96	ಮೆ॥ ಜಾರ್ಜ್ ಕ್ಯಾಫರ್ಡ್	ಪಂಜರಾಬಾದ ತಾಲ್ಲೂಕು ಕೆಂಚಪ್ಪನಹಳ್ಳಿ ಹೋಬಳಿ ಸೀಗೆಹಳ್ಳಿ ಗ್ರಾಮದ	ಚತುರ್ಗಡಿ. 1 ಪೂರ್ವಕ್ಕೆ ದೈತಾಪುರದಗಡಿ 2 ಪಶ್ಚಿಮಕ್ಕೆ ಸರ್ವೆ 93-94-95—84—13—11-10 ಈ ನಂಬರು ಜಮೀನುಗಳೂ 3 ದಕ್ಷಿಣಕ್ಕೆ ಸರ್ವೆ ನಂಬರ್ 1ನೇ ಖರಾಬು 4 ಉತ್ತರಕ್ಕೆ ಅನಿಗಳಲಿ ಗ್ರಾಮದ ಗಡಿ	74	30	ಕಾಯಂ 1 ಹಂಗಾಮಿ 1	ದರ 8 ದರ 0	1 ಎಕ್ಕೆಗೆ 0 0	ಹರಾಜ್ ತಾರೀಖು 20ನೇ ಜನವರಿ 1890ನೇ ಇಸವಿ ಮಂಜರಾಬಾದ ತಾಲ್ಲೂಕು ಕಛೇರಿದುಲ್ಲಿ

ಖರೀದಿದಾರರ ಅಪೇಕ್ಷೆಮೇರೆ

ನೊಟಿಫಿಕೇಷನ್.

10ನೇ ಡಿಸೆಂಬರ 1889ನೇ ಇಸವಿ.

ಇದರಿಂದ ಸಮಸ್ತ ಜನಗಳಿಗೂ ತಿಳಿಯಪಡಿಸುವದೇನಂದರೆ,—ಸರ್ಕಾರದವರ ಆಜ್ಞೆ ಅನುಸರಿಸಿ ಹಾಸನ ಡಿಸ್ಟ್ರಿಕ್ಟ್ ಬಾಬತು ಅನುಭವಯೋಗವಾದ ರೆವಿನ್ಯೂ ರಿಕಾರ್ಡುಗಳು ನಾಕ ಪಡಿಸಲ್ಪಡುವವು.

ದಸ್ತೈವಜುಗಳು ದಾಖಲಾತುಗಳು ವಗೈರೆ ನೋಡಿಯಲೂ ಅಪೇಕ್ಷೆವುಳ್ಳ ಕಕ್ಷಿಗಾರರು ಈ ತಾರೀಖು ಲಾಗಾಯತು ಮೂರು ತಿಂಗಳ ವಳಗಾಗಿ ನಮ್ಮನ್ನ ಕೇಳಿ ಕೊಳ್ಳಬಹುದು.

ಪಿ. ಆರ್. ಪೂರ್ಣಯ್ಯ, ಡೆಪ್ಯೂಟಿ ಕಮ್ಮಿಷನರ್.

ನಗರ ದಿವಿಜಿ ಡಿಸ್ಟ್ರಿಕ್ಟ್ ಜಡ್ಜರವರ ಕೋರ್ಟನಲ್ಲಿ.

1889ನೇ ಇಸವಿ ಅರ್ಜೀ ನಂಬರ 116.

ಮೃತಪಟ್ಟ ಚಿದ್ದೇಗಗೌಡನ ಆಸ್ತೀ ವಿಷಯದಲ್ಲಿ—

ಅರ್ಜೀದಾರ ಮಲ್ಲೇಗವೊಡನ ಮಗ ಗಿಡ್ಡೇಗವೊಡನು, ಮೃತಪಟ್ಟ ಸದರೀ ಚಿದ್ದೇಗವೊಡನಿಗೆ ಪಮ್ಮ ಆಗಬೇಕೆಂಬಿ ಹಕ್ಕುದಾರೀ ಮೇಲೆ ಕಡೂರು ಡಿಸ್ಟ್ರಿಕ್ಟ್ ಜಿಕ್ಕಮುಗಳೂರು ತಾಲ್ಲೂಕು ಮಳಲೂರು ಮಾಗಣಿ ಹಾದಿಹಳ್ಳಿಸ್ಥಳದ ಬುಲ್ಲೇಗವೊಡನ ಮಗ ಗಿಡ್ಡೇಗವೊಡನು ಸದರೀ ಹಾದಿಹಳ್ಳಿಗ್ರಾಮದ ಪಾಸಸ್ಥನಾಗಿ ಮೃತಪಟ್ಟ ಚಿದ್ದೇಗವೊಡನ ಜೆಂದಗಿ ಬಗ್ಯಾಗಿ ಬರತಕ್ಕ 620 ರೂಪಾಯಿ ಸೂಲಗಳನ್ನು ವಸೂಲ ಮಾಡುವದಕ್ಕೆ 1860ನೇ ಇಸವಿ 27ನೇ ಆಕ್ಟು ಮೇರಿಗೆ ಸರ್ಟಿಫಿಕೇಟ್ ಬಯ್ಯೆ ಈ ಕೋರ್ಟಿಗೆ ಖಾಯಿಷ್ ಮಾಡಿರುತ್ತಾನೆ.

ಸದರೀ ದರಖಾಸ್ತುದಾರನಾದ ಮಲ್ಲೇಗವೊಡನ ಮಗ ಗಿಡ್ಡೇಗವೊಡನ ಅರ್ಜಿಯನ್ನು 1890ನೇ ಇಸವಿ ಜನವರಿ ತಿಂಗಳು ತಾರೀಖು 18ರಲ್ಲು ಕೇಳಿ ಸರ್ಟಿಫಿಕೇಟ್ ಪಡೆಯತಕ್ಕ ಬಾಧ್ಯತೆಯನ್ನು ವಿಮರ್ಶ ಮಾಡಲ್ಪಡುತ್ತೆ. ಆ ಕಾಲವಲ್ಲಿ ಸದರೀ ಮೃತಪಟ್ಟ ಚಿದ್ದೇಗವೊಡನ ಆಸ್ತಿಗೆ ಹಕ್ಕುದಾರರಾದ ವಿರೋಧ್ಯರೂ ಈ ಕೋರ್ಟನಲ್ಲಿ ಹಾಜರ್ ಇರಬೇಕೆಂದು ಇದರಿಂದ ತಿಳಿಯಪಡಿಸಿ ಇಟ್ಟೆ.

1889ನೇ ಇಸವಿ ಡಿಸೆಂಬರ ತಿಂಗಳು 13ನೇ ತಾರೀಖಿನಲ್ಲಿ ಕೋರ್ಟು ಮೊಹರ ಮತ್ತು ನಮ್ಮ ದಸ್ತಖತ್ತೊಡನೆ ಕೊಡೋಣವಾಗಿದೆ,

ಟಿ. ನರಹರಿರಾವ್,

ಡಿಸ್ಟ್ರಿಕ್ಟ್ ಜಡ್ಜ್.